ನಕ್ಕುಬಿಡಿ

### ಖುಷಿಯಾಗಿದೆ

ಸಂದರ್ಶಕ: ರೇಡಿಯೋದಲ್ಲಿ ಎಫ್.ಎಂ. ಬಂದಮೇಲೆ ನಿಮಗೆ ಖುಷಿಯಾಗಿದೆಯೇ?

ಕಂಡಕ್ಟರ್ ಮಂಜ: ತುಂಬಾ ಖುಷಿಯಾಗಿದೆ.

ಸಂದರ್ಶಕ: ಹೇಗೆ?

ಕಂಡಕ್ಟರ್ ಮಂಜ: ಪ್ರಯಾಣಿಕರು ಎಫ್.ಎಂ.ನಲ್ಲಿ ಬರುವ ಹಾಡುಗಳನ್ನು ಕೇಳುತ್ತಾ ಚಿಲ್ಲರೆ ಪಡೆಯುವುದನ್ನೇ ಮರೆತು ಹಾಗೇ ಇಳಿದು ಹೋಗ್ತಿದಾರೆ...!

### ಮತ್ತೇನು ಕೊಡ್ಲಿ?

ಸಪ್ಲೇಯರ್: ಏನು ಕೊಡ್ಲಿ?

ಗಿರಾಕಿ: ಇಡ್ಲಿ ವಡೆ.

ಸಪ್ಲೇಯರ್: ಮತ್ತೇನು ಕೊಡ್ಲಿ?

ಗಿರಾಕಿ: ವಡೆಗಟ್ಟಿ ಇದ್ರೆ ಜೊತೆಗೆ ಸುತ್ತಿಗೇನೂ ತಗೊಂಡು ಬಾ...!

### ಏನು ಉಳಿಯುತ್ತೆ?

ಟೀಚರ್: ಎರಡರಲ್ಲಿ ಎರಡು ಹೋದ್ರೆ ಏನು ಉಳಿಯುತ್ತೆ?

ನೀಯಾ: ಗೊತ್ತಿಲ್ಲ ಟೀಚರ್.

ಟೀಚರ್: ನೋಡಮ್ಮ ನಿನಗೆ ತಿಂಡೀಗೆ ಅಂತ ಎರಡು ಪೂರಿ ಕೊಟ್ಟಿರ್‍ತಾರೆ. ಅದನ್ನು ನೀನು ತಿಂದ್‌ಬಿಟ್ಟೀಯ. ಆಗ ಏನು ಉಳಿಯುತ್ತೆ?

ನೀಯಾ: ಸ್ವಲ್ಪ ಚಟ್ನಿ ಮತ್ತು ಪಲ್ಯ!

**(ಸಂ) ವಿ. ಹೇಮಂತ ಕುಮಾರ, ಬೆಂಗಳೂರು**



### ಮದುವೆ

ಆತ: ನೀನ್ಯಾಕೆ ಮದುವೆ ಮಾಡಿಕೊಂಡೆ?

ಈತ: ಏನು ವಿಚಿತ್ರ ಮಾತನಾಡುತ್ತಿದ್ದೀಯಾ?

ಆತ: ಏಕೆ, ಏನಾಯ್ತು?

ಈತ: ನಾನು ಅವಿವಾಹಿತನಾಗಿದ್ದಾಗ, ಮದುವೆ ಮಾಡಿಕೊಳ್ಳಬಾರದೆ ಎಂದು ನೀನೇ ನನಗೆ ಉಪದೇಶ ಮಾಡುತ್ತಿದ್ದೆಯಲ್ಲ?

### ಕಾರಣ

ನ್ಯಾಯಾಧೀಶರು: ನೀನ್ಯಾಕೆ ಆ ಮನೆಗೆ ನುಗ್ಗಿದೆ?

ಕಳ್ಳ: ನಾನೇನು ಮಾಡಲಿ ಬುದ್ಧಿ? ಅವರ ಮನೆಯ ಎದುರಲ್ಲೇ 'ಸುಸ್ವಾಗತ' ಎಂದು ಕಣ್ಣಿಗೆ ರಾಚುವಂತೆ ಬರೆದಿತ್ತು.

### ನಿರಾಸೆ

ಆಕೆ: ನಾನಿನ್ನು ತಿರುಗಾಡಲು ಬರುವಾಗ ಜೊತೆಗೆ ನನ್ನ ನಾಯಿಯನ್ನು ತರುವುದಿಲ್ಲ.

ಈಕೆ: ಏಕೆ?

ಆಕೆ: ರಸ್ತೆಯಲ್ಲಿ ಜನರು ನನ್ನ ನಾಯಿಯನ್ನೇ ನೋಡುತ್ತಿರುತ್ತಾರೆ. ನನ್ನತ್ತ ಯಾರ ಗಮನವೂ ಇರುವುದಿಲ್ಲ.

**(ಸಂ) ಸೋಮನಾಥ ಎಸ್. ಕರ್ಕೇರ**

---

ಸಮುದ್ರ ಮಥನ

### ಚಿಂತನಾರ್ಹ ಲೇಖನ




'ಸುಧಾ' ಮಾರ್ಚ್ 27ರ ಎ.ಎಂ. ಸುರೇಶ್‌ರವರ ಮುಖಪುಟ ಲೇಖನ 'ಕನ್ನಡ ಶಾಲೆಗೆ ಭವಿಷ್ಯ ಇದೆಯೇ?'ದಲ್ಲಿ ಲೇಖಕರು ಕನ್ನಡ ಶಾಲೆಗಳ ಸ್ಥಿತಿ–ಗತಿಗಳ ಬಗ್ಗೆ ವಿವರವಾಗಿ ತಿಳಿಸಿದ್ದು, ಪ್ರತಿಯೊಬ್ಬ ಕನ್ನಡಿಗರನ್ನು ಲೇಖನ ಚಿಂತೆಗೊಳಪಡಿಸುತ್ತದೆ.

–ಸು. ವಿಜಯಲಕ್ಷ್ಮಿ, ಶಿವಮೊಗ್ಗ; ಎಂ.ಜಿ. ರಾಮಚಂದ್ರ, ಸಾಗರ; ಹೇಮಲತಾ ಸುಬ್ರಹ್ಮಣ್ಯ, ಹಾಲ್ಮತ್ತೂರು ಕೊಪ್ಪ; ಸೂರ್ಯನಾರಾಯಣ ರಾವ್, ಬೆಂಗಳೂರು; ಮೆ.ಗೋ. ಸುಬ್ಬಣ್ಣ, ಮೇಗರವಳ್ಳಿ; ಡಾ. ಕೆ.ಕೆ. ಜಯಚಂದ್ರಗುಪ್ತ, ಹಾಸನ; ಬಿ.ಎನ್. ಸೋಲ್ಲಾಪುರೆ, ಕಮಲನಗರ; ಅಂಕಿತಾ ವಿ.ರೈ, ಪುತ್ತೂರು; ನರೇಂದ್ರ ಸಿರಕಜೆ, ಮೈಸೂರು.

### ಹ್ಯಾಟ್ಸ್ ಆಫ್ ಟು ದುಬೈ

ಮರುಭೂಮಿಯ ಆಹ್ಲಾದ ಲೇಖನವನ್ನು ಓದಿದಾಗ ನಿಜಕ್ಕೂ ಅಚ್ಚರಿಯಾಯ್ತು. ಮರುಳುಗಾಡಿನಲ್ಲಿ ಇಂಥದ್ದೊಂದು ಉದ್ಯಾನವಿರಬಹುದೆಂದು ಊಹಿಸಲೂ ಸಾಧ್ಯವಾಗದಿದ್ದಾಗ, ಎಲ್ಲ ಅನುಕೂಲತೆಗಳಿದ್ದರೂ, ಮನಸ್ಸು ಮತ್ತು ಬುದ್ಧಿಯ ಕೊರತೆಯಿಂದ ಇಂಥ ಉದ್ಯಾನಗಳು ನಮ್ಮಲ್ಲಿ ಇಲ್ಲವಲ್ಲ ಎಂದು ಬೇಸರವಾಯ್ತು. ಹ್ಯಾಟ್ಸ್ ಆಫ್ ಟು ದುಬೈ.

–ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

### ಮನಮೋಹಕ

ಶರಣಪ್ಪ ಬಾಚಲಾಪುರರ ಚಿತ್ರಲೇಖನ 'ಕಪಲೆಪ್ಪನ ದಿಡಿಗು' ಮನಮೋಹಕವಾಗಿದೆ.

ಬಯಲು ಸೀಮೆಯಲ್ಲೂ ಸಹ ಮಲೆನಾಡಿನ ತಡಸಲು, ಜಲಪಾತ ಇಲ್ಲವೆ 'ದಬೆ–ದಬೆ' ಹೋಲುವ ಮತ್ತೆ ಅಲ್ಲಿಯ ಸೌಂದರ್ಯವೇ ಮೈವೆತ್ತಿದಂತೆ ತೋರುವ 'ಕಪಲೆಪ್ಪನ ದಿಡಿಗು' ಈ ಭಾಗದಲ್ಲಿರುವುದನ್ನು ಪರಿಚಯಿಸಿದ್ದು ಸಂತಸದ ಸುದ್ದಿ.

–ಕೊಹಿಮ, ಬಸರಕೋಡು

### ಉತ್ತಮ ಮಕ್ಕಳ ಕಥೆ

ಎಳೆಯರ ಅಂಗಳದಲ್ಲಿ ಪ್ರಕಟವಾದ ಶಿವರಾಮ ಭಟ್ ಹತ್ತೊಕ್ಕಲು ಬರೆದ 'ಬೆವರಿನ ದುಡಿಮೆ' ಎಂಬ ಕತೆಯು ಬಹಳ ಉತ್ತಮವಾಗಿತ್ತು.

–ರೇಖಾ ಹೆಗಡೆ, ಮಂಗಳೂರು

### ಮಾರ್ಮಿಕ ಕಥೆ

ಎಸ್. ಗಿರಿಜ ಅವರ 'ವಿಪರ್ಯಾಸ' ಕಥೆ ಸಹಜವಾಗಿ ಓದಿಸಿಕೊಂಡು ಹೋಗುತ್ತದೆ.

–ಡಿ. ದೊಡ್ಡ ಲಿಂಗೇಗೌಡ, ಕೊಳ್ಳೇಗಾಲ; ಉಮಾ. ವಿ.ಎಸ್., ಸೋಮವಾರಪೇಟೆ; ಪ್ರದೀಪ್ ಎಸ್. ಚೆಲುವರಸನ ಕೊಪ್ಪಲು; ಎಚ್. ಆನಂದಕುಮಾರ್, ಚಿತ್ರದುರ್ಗ

### ಸಮರ್ಥ ವಿಶ್ಲೇಷಣೆ

ವಿಚಾರ ಲಹರಿಯಲ್ಲಿ ಮೂಚಿರವರು ಜಾತಿಯ ಬಗೆಗೆ ಅತ್ಯಂತ ಸಮರ್ಥವಾಗಿ ಹೃದಯ ತಟ್ಟುವಂತೆ ವಿಶ್ಲೇಷಣೆ ಮಾಡಿದ್ದಾರೆ.

–ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ, ಶಂಕರೇ ಗೌಡ ತುಂಬಕೆರೆ, ಮಂಡ್ಯ

### ತಿದ್ದುಪಡಿ

ಮಾರ್ಚ್ 20ರ ಸಂಚಿಕೆಯಲ್ಲಿ ಹನಿಯವರು ಬರೆದಿರುವ 'ಲೋಕಸಭೆಯತ್ತ ಸೇನ್' ಲೇಖನ (ಪುಟ 78)ದಲ್ಲಿ, ಮೂನ್ ಮೂನ್ ಸೇನ್ ಅಪರ್ಣಾ ಸೇನ್‌ಳ ಮಗಳೆಂದು ಬರೆದಿದ್ದಾರೆ. ಮೂನ್ ಮೂನ್ ಸೇನ್ ಇತ್ತೀಚೆಗೆ ಕೊನೆಯುಸಿರೆಳೆದ ಸುಚಿತ್ರಾಸೇನ್‌ಳ ಮಗಳು.

–ಗೋಪಾಲ ಆಶ್ರಿತ, ಎಚ್.ಎಸ್.ಮಂಜುನಾಥ ಬೆಂಗಳೂರು,

### ತಪ್ಪಾಗಿದೆ



ಸುಧಾ ಯುಗಾದಿ ವಿಶೇಷಾಂಕ (2014) ದಲ್ಲಿ ಹೆಜ್ಜೆಗುರುತು ಲೇಖನ ಮಾಲೆಯ 'ಕೃಷಿ ಭೂಮಿಯಲ್ಲಿ ನನ್ನ ಅನುಭವ' ಲೇಖನದಲ್ಲಿ ಬರಹಗಾರ್ತಿಯ ಹೆಸರು ಶೋಭಾ ಸುಂದರೇಶ್ (ರೈತ ಮುಖಂಡ ಎನ್.ಡಿ. ಸುಂದರೇಶ್‌ರವರ ಪತ್ನಿ) ಎಂದಾಗಬೇಕಿತ್ತು. ಕಣ್ತಪ್ಪಿನಿಂದ ರಾಧಾ ಸುಂದರೇಶ್ ಎಂದಾಗಿದೆ. ಅದಕ್ಕಾಗಿ ವಿಷಾದಿಸುತ್ತೇವೆ.

– ಸಂ.